ಶ್ರೀ ಮಾಟಾಳ್ ನಾಗರಾಜ್ : ಇದರ ಬಗ್ಗೆ ಚರ್ಚೆ ಪ್ರಾರಂಭವಾಗಿ, ಚರ್ಚೆ ಅಪೂರ್ಣವಾಗಿದೆ. ನಾವು ಒಂದೇ ಸಮನೇ ಕೇಳುತ್ತಿದ್ದೇವೆ. ಬಹಳ ಅನ್ಯಾಯ ನಡೆಯುತ್ತಿದೆ.

ಅಧ್ಯಕ್ಷರು : ನಾನು ಇದರ ಮಹತ್ವವನ್ನು ಗಮನಿಸಿ ಅಲ್ಪಕಾಲಾವಧಿ ಚರ್ಚೆಗೆ ನಾನೇ ಅವಕಾಶ ಮಾಡಿಕೊಟ್ಟೆ. ಆ ಚರ್ಚೆ ಪ್ರಾರಂಭವಾಗಿದೆ. ಆದರೆ ಆ ಚರ್ಚೆ ಅಪೂರ್ಣವಾಗಿದೆ. ಚರ್ಚೆ ಮುಂದಿವರಿಯಬೇಕಾಗಿದೆ. ಬೇಕಾದರೆ, ಇಮ ಬರುವ 25.9.91, 26.9.91 ಮತ್ತು 27.9.91ನೇ ತಾರೀಖಿನಂದು ಚರ್ಚೆ ಮುಂದಿವರಿಯುತ್ತಿದೆ. ಸದನದ ಕಾರ್ಯ ಕಲಾಪಗಳ ಸಮಿತಿ ಈ ಬಗ್ಗೆ ತೀರ್ಮಾನ ಮಾಡಿದೆ. ಉಳಿದ ಚರ್ಚೆಗಳೆಲ್ಲೆಲ್ಲಾ ಕೂಡಾ ದಿನಾಂಕ 25/26/27.9.91ರಂದು ಮಾಡುವುದಾಗಿ ಹೇಳಲಾಗಿದೆ.

ಶ್ರೀ ಮಾಟಾಳ್ ನಾಗರಾಜ್ : ಈಗ ಬೇದಿಕೆಯಲ್ಲಿ ಚರ್ಚೆ ಮಾಡುವುದಕ್ಕೆ ನಮಗೆ ಕಾಲಾವಕಾಶ ಇಲ್ಲ. ಅದು ತಮಗೂ ಗೊತ್ತಿದೆ. ಶುಕ್ರವಾರ ದಿವಸ ಸುಮಾರು ಇಪ್ಪತ್ತೈದು ಇಲಾಖೆಗಳ ಬೇದಿಕೆಗಳು ಒಟ್ಟಿಗೆ ಪಾಕಿದ್ದಾರೆ. ಆದುದರಿಂದ, ಇದು ಯಾವಾಗ ಬರುತ್ತದೆ? ಏಕೆಂದರೆ, ತೊಂದರೆಗೆ ಸಿಕ್ಕಿದ್ದಾರೆ. ಮಂಡ್ಯ, ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರವಾಪ ಉಂಟಾಗಿದೆ. ಈ ಬಗ್ಗೆ ಲೋಕಸಭೆಯಲ್ಲೂ ಕೂಡಾ ಪ್ರಸ್ತಾಪವಾಗಿದೆ. ನಮ್ಮ ರಾಜ್ಯ ಸರ್ಕಾರದವರು ಇದರ ಬಗ್ಗೆ ಸಂಪೂರ್ಣವಾಗಿ ಗಮನಪರಿಸಿಲ್ಲ. ಅಲ್ಲಿರತಕ್ಕಂಥವರಿಗೆ ಪರಿಹಾರ ಕೊಟ್ಟಿಲ್ಲ. ಸತ್ತವರಿಗೆ ಪರಿಹಾರ ಕೊಟ್ಟಿಲ್ಲ. ಈ ಎಲ್ಲಾ ವಿಚಾರಗಳು ತಮಗೆ ಗೊತ್ತಿದೆ. ಮತ್ತೆ ಕೆ.ಆರ್. ನಗರದಲ್ಲಾಗಿರತಕ್ಕ ಪರಿಸ್ಥಿತಿ ಬಗ್ಗೆ, ಈ ಎಲ್ಲಾ ವಿಷಯಗಳ ಚರ್ಚೆ ಇವೊತ್ತೇ ನಡೆಯಲಿ.

ಅಧ್ಯಕ್ಷರು: ಇವೊತ್ತು ಆಗುವುದಿಲ್ಲ. ಚರ್ಚೆಗೆ ಬೇರೆ ಕಾಲಾವಧಿಯನ್ನು ಗೊತ್ತು ಮಾಡುತ್ತೇನೆ.

(2) ರಾಜ್ಯದಲ್ಲಿ ಸಿ.ಬಿ.ಐ. ತನಿಖೆಗೆ ಅನುಮತಿ ವಾಪಾಸ್ ಪಡೆದಿರುವುದು.

ಶ್ರೀ ಕೆ.ಎಚ್. ರಂಗನಾಥ್ (ಹಿರಿಯೂರು) : ಇದು ಅಪ್ಪಣೆ ಕೋರಿ ಒಂದು ಕಾಗದ ಬರೆದಿದ್ದೇನೆ. ತಾವು ಅಪ್ಪಣೆ ಕೊಟ್ಟಿದ್ದೀರಿ. ಇದು ಜೀರೋ ಅವರ್‌ನಲ್ಲಿ ಎತ್ತುವುದು ಸರಿಯಿಲ್ಲವೆಂದು, ಪೂರ್ವಭಾವಿಯಾಗಿ ತಮಗೆ ತಿಳಿಸಿದ್ದೇನೆ. ರಾಜ್ಯದಲ್ಲಿ ಸಿಬಿಐ ತನಿಖೆ ಅನುಮತಿ ವಾಪಸ್ಸು ಎಂದು ಹೇಳಿ ಇದರ ಶಿರೋನಾಮೆಯಡಿ ತಂದಿದ್ದಾರೆ. ಮತ್ತು ಅದರಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದರ ವಾಸ್ತವಾಂಶವನ್ನು ಈ ಸಭೆಗೆ ತಿಳಿಸಬೇಕಾಗುತ್ತದೆ. ಏಕೆಂದರೆ, ಯಾವ ಹಿನ್ನಲೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇದನ್ನೂ ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲೂ ಕೂಡಾ ವಾಪಸ್ಸೂ ತೆಗೆದುಕೊಂಡಿರಲಿಲ್ಲ. ಮೊನ್ನೆ ಜುಲೈ ತಿಂಗಳಲ್ಲಿ ತೆಗೆದುಕೊಂಡಿದ್ದಾರೆಂದು ಹೇಳಿ, ಆಗಸ್ಟ್ ತಿಂಗಳಲ್ಲಿ ಗೆಜೆಟ್‌ನಲ್ಲಿ ಬಂದಿದೆಯೆಂದು ಹೇಳಿದ್ದಾರೆ. ಇದರಿಂದ ಇವೊತ್ತು ರಾಜೀವ್‌ಗಾಂಧಿಯವರ ಹತ್ಯೆಯ ಬಗ್ಗೆ ಏನು ಇನ್‌ವೆಸ್ಟಿಗೇಶನ್ ನಡೆಯುತ್ತಿದೆ? ಆ ಇನ್‌ವೆಸ್ಟಿಗೇಶನ್ ಬರೀ ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ಇಡೀ ರಾಷ್ಟ್ರದಲ್ಲಿ ವ್ಯಾಪಕವಾಗಿ ನಡೆಯಬೇಕಾಗಿತ್ತು. ಹೀಗಿರುವಾಗ, ಸರ್ಕಾರ ಇದನ್ನು ವಾಪಸ್ಸು ತೆಗೆದುಕೊಂಡಿದ್ದರೆ, ಅದು ವಾಸ್ತವಾಂಶವಾದರೆ, ಆದರೆ, if it is a fact ಅದು ತೊಂದರೆಯಾಗುತ್ತದೆ. ಅದು ವಾಸ್ತವಾಂಶ ಇರಬಹುದೆಂದು ಪತ್ರಿಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕಳೆದ ಜುಲೈ 27 ರಂದು ರಾಜ್ಯ ಸರ್ಕಾರ ಕೈಗೊಂಡಿರುವ ಈ ತೀರ್ಮಾನ ಆಗಸ್ಟ್ 8 ರಂದು ರಾಜ್ಯ ಪತ್ರ(ಗೆಜೆಟ್) ದಲ್ಲಿ ಪ್ರಕಟವಾಗಿದೆಯೆಂದು ಹೇಳುತ್ತಾರೆ. I tried my best to lay my hands on that Gazette but I could not. ಸ್ವಾಮಿ, ಮೊನ್ನೆ ಈ ಕೋಣನಕುಂಟೆಯಲ್ಲಿ.....ಆಗಿದ್ದುದಿಂದ

ತತ್‌ಕ್ಷಣ ಕೇಸ್ ರಿಜಿಸ್ಟರ್ ಆಗಿದಾಗ್ಯೂ ಕೂಡ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ.

"ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರೈಮ್ ನಂ. 19891 ಎಂದು ಮೊಕದ್ದಮೆ ದಾಖಲಾಗಿತ್ತು. ಇಷ್ಟಾದರೂ ಕೂಡ ಮುಂದೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಆದರೆ ರಾಜ್ಯ ಸರ್ಕಾರದ ಈ ಕ್ರಮದಿಂದ ಸಿ.ಬಿ.ಐ.ಗೆ. ಸರ್ಕಾರದ ಅನುಮತಿ ಇಲ್ಲದೆ ಯಾವುದೇ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರಿಂದ ರಾಜೀವ್‌ಗಾಂಧಿಯವರ ಹತ್ಯೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ತನಿಖೆ ನಡೆಯಲು ಸಿ.ಬಿ.ಐ. ನವರಿಗೆ ತೀವ್ರವಾದ ಬಿಕ್ಕಟ್ಟು ಉಂಟಾಗಿದೆಯೆಂದು ಗೊತ್ತಾಗಿದೆ." ಹೀಗೆಂದು. ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಬಯಸುತ್ತೇನೆ. ಅದನ್ನು ಸರ್ಕಾರ ಈ ಸಭೆಗೆ ತಿಳಿಸಬೇಕಾಗಿದೆ. ಇದು ವಾಸ್ತವಿಕವಾದ ಅಂಶವೇ ಹೇಗೆ? ಎಂದು ವೇಳೆ ವಾಸ್ತವಾದ ಅಂಶವೇ ಆಗಿದ್ದರೆ ಈವತ್ತು ದಿನನಿತ್ಯ ನಡೆಯಬೇಕಾಗಿರತಕ್ಕ ಒಂದು ವಿಚಾರಣೆಗೆ ಸಹಾಯಕವಾಗತಕ್ಕ ರೂಪದಲ್ಲಿ ಸರ್ಕಾರ ಏನು ಮಾಡಿದೆ. ಅದನ್ನು ಸರ್ಕಾರ ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಸಂದರ್ಭದಲ್ಲಿ...

ಅಧ್ಯಕ್ಷರು : ನೀವು ಬರೆದು ಕಳಿಸಿದ್ದೀರಾ? ಅವರು ಬರೆದು ಕಳಿಸಿದ್ದರು.ಆದುದರಿಂದ..

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ಓರಿಯ ಸದಸ್ಯರಾದ ಶ್ರೀಮಾನ್ ಕೆ.ಪಿಚ್. ರಂಗನಾಥ್ ರವರು ಏನು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೋ ಅದಕ್ಕೆ ಸಂಜೆಯೊಳಗಾಗಿ ವಿವರಣೆಯನ್ನು ಕೊಡುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಜೇಜ್ ಸೇಠ್ (ಸಾರಿಗೆ, ವಕ್ಫ್ ಹಾಗೂ ಹಜ್ ಸಮಿತಿಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ 1950ನೇ ಇಸವಿಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಕಾಯ್ದೆಯ 33(4) ನೇ ಕಲಮಿನ ಮೇರೆಗೆ 1987-88ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಕೆ.ಪಿಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, 1983ನೇ ಇಸವಿಯ ಜಿಲ್ಲಾ ಪರಿಷತ್ತುಗಳು, ಮಂಡಲ ಪಂಚಾಯಿತಿಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಕಾಯ್ದೆಯ 309(3)ನೇ ಕಲಮಿನ ಮೇರೆಗೆ; ಸರ್ಕಾರವರು ಕೈಗೊಂಡ ಕ್ರಮದ ಜ್ಞಾಪಕ ವಿವರಣಾ ಪತ್ರದೊಂದಿಗೆ 1988-89 ಹಾಗೂ 1989-90 ನೇ ಸಾಲುಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಜಿಲ್ಲಾಪರಿಷತ್ತುಗಳ ವಾರ್ಷಿಕ ಆಡಳಿತ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

1) ಮೈಸೂರು 2) ಮಂಡ್ಯ 3) ಹಾಸನ 4) ಚಿಕ್ಕಮಗಳೂರು 5) ದಕ್ಷಿಣ ಕನ್ನಡ 6) ಮಡಿಕೇರಿ

ಶ್ರೀ ಎಂ. ವೀರಪ್ಪಮೊಯ್ಲಿ (ಶಿಕ್ಷಣ ಸಚಿವರು) : ಶ್ರೀ ಧರ್ಮಸಿಂಗ್(ಗೃಹ ಹಾಗೂ ಅಬಕಾರಿ ಸಚಿವರವರ) ಪರವಾಗಿ: ಸನ್ಮಾನ್ಯ ಅಧ್ಯಕ್ಷರೆ 1956ನೇ ಇಸವಿಯ ಕಂಪನಿಗಳ ಕಾಯ್ದೆಯ 619 (ಎ) ಕಲಮಿನ ಮೇರೆಗೆ 1989-90 ನೇ ಸಾಲಿನ